# ಬಹುಪಯೋಗಿ ಸೂರ್ಯಕಾಂತಿ ತಳಿ ಬಿಡುಗಡೆಗೆ ಸಿದ್ಧ

## ಜಿಕೆವಿಕೆ ವಿಜ್ಞಾನಿಗಳಿಂದ ಕೆಬಿಎಸ್‌ಎಚ್-90 ಸಂಶೋಧನೆ | ಈ ತಳಿಗಿದೆ ಕೇದಿಗೆ ರೋಗದ ವಿರುದ್ಧ ಹೋರಾಡುವ ಶಕ್ತಿ

■ **ಉದಯವಾಣಿ ಸಮಾಚಾರ**

**ಬೆಂಗಳೂರು:** ಕಡಿಮೆ ಅವಧಿಯಲ್ಲಿ ಅಧಿಕ ಇಳುವರಿ ಕೊಡುವ ಹಾಗೂ ಕೇದಿಗೆ ರೋಗ ನಿರೋಧಕ ಶಕ್ತಿಯನ್ನು ಹೊಂದಿರುವ ಬಹುಪಯೋಗಿ ಹೊಸ ಸೂರ್ಯ ಕಾಂತಿ ಕೆಬಿಎಸ್ ಎಚ್ -90 ತಳಿಯನ್ನು ಜಿಕೆವಿಕೆ ವಿಜ್ಞಾನಿಗಳು ಸಂಶೋಧಿಸಿದ್ದು, ಯಶಸ್ವಿ ಪ್ರಯೋಗದ ಬಳಿಕ ರೈತರಿಗೆ ನೀಡಲು ಜಿಕೆವಿಕೆ ಮುಂದಾಗಿದೆ.



> ಕಡಿಮೆ ಅವಧಿಯಲ್ಲಿ ಅತ್ಯಧಿಕ ಇಳುವರಿ ನೀಡುವ ಹಾಗೂ ಕೇದಿಗೆ ರೋಗವನ್ನು ತಡೆದುಕೊಳ್ಳುವ ಶಕ್ತಿ 'ಕೆಬಿಎಸ್‌ಎಚ್-90' ತಳಿ ಹೊಂದಿದೆ. ಸಾಮಾನ್ಯ ಸೂರ್ಯಕಾಂತಿಗಿಂತ ಇದರಲ್ಲಿ ಕಾಳು ಕಟ್ಟುವಿಕೆ ಹೆಚ್ಚಾಗಿ ಉತ್ತಮ ಇಳುವರಿಗೆ ಪಡೆಯಬಹುದಾಗಿದೆ. ಪ್ರಸ್ತಕ ಸಾಲಿನಿಂದ ಹೊಸ ತಳಿ ಬೀಜ ಮಾರುಕಟ್ಟೆಯಲ್ಲಿ ಲಭ್ಯವಿದೆ.
>
> ● ಡಾ.ಎಂ .ಎಸ್. ಉಮಾ, ವಿಜ್ಞಾನಿ ಸೂರ್ಯಕಾಂತಿ ಪ್ರಾಯೋಜನೆ ವಿಭಾಗ, ಜಿಕೆವಿಕೆ ಬೆಂಗಳೂರು

ಅಖಿಲ ಭಾರತ ಸುಸಂಘಟಿತ (ಸೂರ್ಯಕಾಂತಿ) ಸಂಶೋಧನಾ ಪ್ರಾಯೋಜನೆ, ವಲಯ ಕೃಷಿ ಸಂಶೋಧನಾ ಕೇಂದ್ರ ಜಿಕೆವಿಕೆಯ ಕೃಷಿ ವಿಜ್ಞಾನಿಗಳ ಹೆಚ್ಚುತ್ತಿರುವ ಸೂರ್ಯಕಾಂತಿ ಎಣ್ಣೆ ಬೇಡಿಕೆಯನ್ನು ಗಮನದಲ್ಲಿ ಇಟ್ಟುಕೊಂಡು 'ಕೆಬಿಎಸ್‌ಎಚ್-90 ಸಂಕರಣ ಸೂರ್ಯಕಾಂತಿ ತಳಿ'ಯನ್ನು ಸತತ 7 ವರ್ಷಗಳ ನಿರಂತರ ಸಂಶೋಧನೆಯಿಂದ ತಳಿಯನ್ನು ಅಭಿವೃದ್ಧಿ ಪಡಿಸಲಾಗಿದೆ. ಉತ್ತರ ಹಾಗೂ ದಕ್ಷಿಣ ಕರ್ನಾಟಕದ ಜಿಲ್ಲೆಗಳಲ್ಲಿ ಬೆಳೆಸಬಹುದಾಗಿದೆ. ಕೆ.ಬಿ.ಎಸ್.ಎಚ್-90 ಅನ್ನು ರಾಷ್ಟ್ರಮಟ್ಟದಲ್ಲಿ ಬಿಡುಗಡೆಗಾಗಿ ಶಿಫಾರಸು ಮಾಡಲಾಗಿದೆ.

ರೋಗ ರುಜಿನ ತಡೆದುಕೊಳ್ಳುವ ಶಕ್ತಿ ಇತರೆ ತಳಿಗೆ ಹೋಲಿಕೆ ಮಾಡಿದರೆ ಕೆಬಿಎಸ್‌ಎಚ್ -90 ತಳಿಗೆ ಹೆಚ್ಚಿದೆ. ಇದು ಕೇದಿಗೆ ರೋಗದ ವಿರುದ್ಧ ಹೋರಾಡುವ ಶಕ್ತಿಯನ್ನು ಹೊಂದಿದೆ.

**ಅಲ್ಪಾವಧಿಯಲ್ಲಿ ಕಟಾವು:** ಹೊಸ ತಳಿ ಕೆಬಿಎಸ್‌ಎಚ್ 90 ಸಂಕರಣ ಸೂರ್ಯಕಾಂತಿಯು ಅಲ್ಪಾವಧಿ ತಳಿಯಾಗಿದೆ. ನಾಟಿ ಮಾಡಿದ ಕೇವಲ 80 ರಿಂದ 82 ದಿನಕ್ಕೆ ಕಟಾವಿಗೆ ಬರುತ್ತದೆ. ಒಂದು ಹೆಕ್ಟೇರ್‌ಗೆ ನೀರಾವರಿ ಪ್ರದೇಶದಲ್ಲಿ 22 ರಿಂದ 24 ಕ್ವಿಂಟಾಲ್, ಮಳೆ ಆಶ್ರಿತ ಪ್ರದೇಶದಲ್ಲಿ 12 ಕ್ವಿಂಟಾಲ್ ಇಳುವರಿ ನೀಡಲಿದೆ. ಇದರಲ್ಲಿ ಶೇ.39ರಿಂದ 40ರಷ್ಟು ಎಣ್ಣೆ ಅಂಶ ಇರಲಿದೆ. ಒಂದು ಹೆಕ್ಟೇರ್ ಪ್ರದೇಶದಲ್ಲಿ 900 ಕೆ.ಜಿ. ಎಣ್ಣೆ ಇಳುವರಿ ಸಿಗಲಿದೆ. ವರ್ಷಪೂರ್ತಿ ಎಲ್ಲ ವಾತಾವರಣಗಳಲ್ಲೂ ಈ ಬೆಳೆ ಬೆಳೆಯಬಹುದಾಗಿದೆ. ಕೆಬಿಎಸ್‌ಎಚ್-90 ತಳಿಯ ಬೀಜಕ್ಕೆ ಒಂದು ಕೆಜಿಗೆ 500 ರೂ.ನಿಗದಿಪಡಿಸಲಾಗಿದೆ.

**ಬಿತ್ತನೆ ಹೇಗೆ?:** ಒಂದು ಎಕರೆಗೆ ಪ್ರದೇಶಕ್ಕೆ 2ಕೆ.ಜಿ. ಬೀಜದ ಅಗತ್ಯವಿದೆ. ಸೂರ್ಯಕಾಂತಿ ಗಿಡವು ಮಧ್ಯಮ ಎತ್ತರದಲ್ಲಿ ಬೆಳೆಯುವುದರಿಂದ ಸಾಲಿನಿಂದ ಸಾಲಿಗೆ ಎರಡು ಅಡಿ, ಗಿಡದಿಂದ ಗಿಡಕ್ಕೆ ಸಾಲಿನೊಳಗೆ ಒಂದು ಅಡಿ ಅಂತರ ನಿರ್ಮಿಸಬೇಕು. ಗೊಬ್ಬರ ಹಾಕಿ ಬಿತ್ತನೆ ಮಾಡಿದ 6 ದಿನಕ್ಕೆ ಮೊಳಕೆಯೊಡೆಯಲಿದೆ. 10 ದಿನಗಳಲ್ಲಿ ಗಿಡ ಬೆಳೆಯಲಾರಂಭವಾಗುತ್ತದೆ. ಉತ್ತಮ ಇಳುವರಿ ಪಡೆಯಲು ಒಂದು ಗುಣಿಯಲ್ಲಿ ಒಂದೇ ಗಿಡ ಬೆಳೆಯುವಂತೆ ನೋಡಿಕೊಳ್ಳಬೇಕು. ವರ್ಷದಲ್ಲಿ 3 ಬಾರಿ ಬೆಳೆ ತೆಗೆಯಬಹುದು. ಒಂದೇ ಪ್ರದೇಶದಲ್ಲಿ ಪದೇ ಪದೇ ಬೆಳೆದರೆ ಆ ಪ್ರದೇಶದ ಮಣ್ಣಿನ ಫಲವತ್ತತೆ ಕಡಿಮೆಯಾಗಲಿದೆ.

Udayavani
Pg.04

# ಕೆಎಂಎಫ್ ನಂದಿನಿ ಬ್ರ್ಯಾಂಡ್ ದೋಸೆ ಹಿಟ್ಟು ಶೀಘ್ರ ಬಿಡುಗಡೆ

## 1, 2 ಕೇಜಿ ಪ್ರಮಾಣದ ಪ್ಯಾಕೇಟ್ ಬಿಡುಗಡೆಗೆ ಸಿದ್ಧತೆ

**ಬೆಂಗಳೂರು:** ಕರ್ನಾಟಕ ಹಾಲು ಮಹಾಮಂಡಳವು(ಕೆಎಂಎಫ್) ಹಾಲು ಹಾಗೂ ಹಾಲಿನ ಉತ್ಪನ್ನಗಳ ಉತ್ಪಾದನೆಯೊಂದಿಗೆ ಒಂದು ಹೆಜ್ಜೆ ಮುಂದೆ ಹೋಗಿ ಮಾರುಕಟ್ಟೆಗೆ ನಂದಿನಿ ಬ್ರ್ಯಾಂಡ್‌ನಡಿ 'ದೋಸೆ ಹಿಟ್ಟು' ಪರಿಚಯಿಸಲು ಮುಂದಾಗಿದೆ.

ನಂದಿನಿ
ಕೆಎಂಎಫ್


ಕೆಎಂಎಫ್, ಮುಖ್ಯವಾಗಿ ಬೆಂಗಳೂರು ಮಹಾನಗರದ ಮಾರುಕಟ್ಟೆ ಗಮನದಲ್ಲಿಟ್ಟುಕೊಂಡು ದೋಸೆ ಹಿಟ್ಟು ಮಾರಾಟಕ್ಕೆ ಸಿದ್ಧತೆ ನಡೆಸಿದೆ. 'ರೆಡಿ ಟು ಕುಕ್' ಪರಿಕಲ್ಪನೆಯಡಿ ಜನರು ಸುಲಭವಾಗಿ ಮನೆಯಲ್ಲೇ ರುಚಿಕರ ದೋಸೆ ಸವಿಯುವ ಅವಕಾಶ ಕಲ್ಪಿಸುವ ಉದ್ದೇಶ ಹೊಂದಲಾಗಿದೆ. ಕಡಿಮೆ ಅವಧಿಯಲ್ಲಿ ಸುಲಭವಾಗಿ ದೋಸೆ ಮಾಡಲು ಪೂರಕವಾಗಿ ಕೆಎಂಎಫ್ ದೋಸೆ ಹಿಟ್ಟು ಉತ್ಪಾದಿಸಲಿದೆ. ಪ್ರಾಯೋಗಿಕವಾಗಿ ಒಂದು ಮತ್ತು ಎರಡು ಕೆ.ಜಿ. ಪ್ರಮಾಣದ ದೋಸೆ ಹಿಟ್ಟಿನ ಪ್ಯಾಕೆಟ್‌ಗಳನ್ನು ಬಿಡುಗಡೆ ಮಾಡುವ ಸಾಧ್ಯತೆ ಇದೆ ಎನ್ನಲಾಗಿದೆ.

ಈಗಾಗಲೇ ನಂದಿನಿ ಬ್ರ್ಯಾಂಡ್ ದೋಸೆ ಹಿಟ್ಟು ಸಿದ್ಧಪಡಿಸಲು ಟೆಂಡರ್ ಪ್ರಕ್ರಿಯೆಯನ್ನು ಪೂರ್ಣಗೊಳಿಸಲಾಗಿದ್ದು, ಸದ್ಯದಲ್ಲೇ ಮಾರುಕಟ್ಟೆಗೆ ಬಿಡುಗಡೆಯಾಗಲಿದೆ. ಈ ಮೂಲಕ ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ಗ್ರಾಹಕರನ್ನು ಸೆಳೆಯುವ ಗುರಿಯನ್ನು ಕೆಎಂಎಫ್ ಹೊಂದಿದೆ. ಪ್ರಸ್ತುತ ನಂದಿನಿ ಬ್ರ್ಯಾಂಡ್‌ನಡಿ ಹಾಲು, ಮೊಸರು, ಮಜ್ಜಿಗೆ, ಐಸ್‌ಕ್ರೀಂ, ಸಿಹಿ ಉತ್ಪನ್ನಗಳು, ತುಪ್ಪ, ಬೆಣ್ಣೆ, ಹಾಲಿನ ಪುಡಿ ಹೀಗೆ ಸುಮಾರು 156ಕ್ಕೂ ಹೆಚ್ಚು ಮಾದರಿಯ ಹಾಲು ಮತ್ತು ಹಾಲಿನ ಉತ್ಪನ್ನಗಳನ್ನು ಮಾರುಕಟ್ಟೆಗೆ ಪೂರೈಸಲಾಗುತ್ತಿದೆ.

KannadaPrabha
Pg.06

**Vijayavani**
**Pg.5c**

# ಟೊಮ್ಯಾಟೋ ಬೆಳೆಗೆ ಬಂತು ಬಂಪರ್ ಬೆಲೆ



ಮಾರುಕಟ್ಟೆಯಲ್ಲಿ ದಾಸ್ತಾನು ಮಾಡಲಾಗುವ ಟೊಮ್ಯಾಟೋ ರಾಶಿ.

■ ಜೆ.ಕೆ. ಆನಂದ್ ಚೇಳೂರು

ಈಗ ಕೆಂಪು ಸುಂದರಿಗೆ ಮತ್ತೆ ಭಾರಿ ಬೆಲೆ ಬಂದಿದೆ. ಆಗಸ್ಟ್ ಮೊದಲ ವಾರದಲ್ಲಿ ಕಡಿಮೆಯಾಗಿದ್ದ ಟೊಮ್ಯಾಟೋ ಬೆಲೆ ಎರಡನೇ ವಾರದಿಂದ ಏರಿಕೆ ಕಾಣುತ್ತಲೇ ಇದೆ. ಈಗ 100 ರೂ. ಆಸುಪಾಸು ತಲುಪಿದೆ.

» ಬೆಳೆಗಾರರ ಮೊಗದಲ್ಲಿ ಸಂತಸದ ಅಲೆ, ಗ್ರಾಹಕರಿಗೆ ಸಂಕಟ

» ಮಳೆಗೆ ಹಾಳಾದ ಬೆಳೆ, ಮಾರುಕಟ್ಟೆಯಲ್ಲಿ ಆವಕ ಕ್ಷೀಣ

ಮಾರುಕಟ್ಟೆಯಲ್ಲಿ ಟೊಮ್ಯಾಟೋ ಬೆಲೆ ಗಗನಕ್ಕೇರುತ್ತಿದ್ದು, 15 ಕೆಜಿ ಬಾಕ್ಸ್ ಸಾವಿರ ರೂ. ಗಡಿ ದಾಟಿದೆ. ಇತ್ತ ಮಾರುಕಟ್ಟೆಗೆ ಬರುವ ಆವಕ ಕಡಿಮೆಯಾಗುತ್ತಿರುವುದು ಬೆಲೆ ಏರಿಕೆ ಕಾರಣ ಎನ್ನಲಾಗಿದೆ. ಉತ್ತಮ ಟೊಮ್ಯಾಟೋ ಎಂದೇ ಹೆಸರಾಗಿರುವ ಸಾಹೋ ಹೆಸರಿನ ತಳಿ 15 ಕೆ.ಜಿ. ಬಾಕ್ಸ್‌ಗೆ 800 ರೂ.ಗಳಿಂದ 1,000 ರೂ.ವರೆಗೂ ಮಾರಾಟವಾಗುತ್ತಿದೆ.

**ಕಳಪೆ ಹಣ್ಣಿಗೂ ಬೆಲೆ:** ಮಾರುಕಟ್ಟೆಯಲ್ಲಿ ಹಣ್ಣನ್ನು ಬೇರ್ಪಡಿಸುವಾಗ, ಕೈಬಿಟ್ಟ ಕಳಪೆ ಟೊಮ್ಯಾಟೋ ಸಹ 15 ಕೆ.ಜಿ. ಬಾಕ್ಸ್‌ಗೆ 400 ರೂ.ಗಳಿಗೂ ಬಿಕರಿಯಾಗಿರುವುದು ವಿಶೇಷ. ಪ್ರಸ್ತುತ ಬೆಲೆ ಏರಿಕೆಗೆ ಕಾರಣವೆಂದರೆ ಕೆಲವೆಡೆ ವಿಪರೀತ ಮಳೆ ಹಿನ್ನೆಲೆಯಲ್ಲಿ ಬೆಳೆ ಕೈಕೊಟ್ಟಿದ್ದು, ಮಾರುಕಟ್ಟೆಗೆ ಆವಕ ಕಡಿಮೆಯಾಗಿದೆ. ಹೀಗಾಗಿ ಬೆಲೆಯಲ್ಲಿ ಏರಿಕೆ ಕಂಡಿದೆ. ಮುಂದಿನ ದಿನಗಳಲ್ಲಿ ಮತ್ತಷ್ಟು ಹೆಚ್ಚಾಗಬಹುದೆಂಬ ನಿರೀಕ್ಷೆ ಬೆಳೆಗಾರರದ್ದಾಗಿದೆ.

ಬೆಲೆ ಏರಿಕೆ ಹಿನ್ನೆಲೆಯಲ್ಲಿ ಮಾರುಕಟ್ಟೆಯಲ್ಲಿ ಸಿಗುತ್ತಿರುವ ಬೆಲೆಯಿಂದ ರೈತರು ಮತ್ತು ಕಮಿಷನ್ ಏಜೆಂಟರ ಮೊಗದಲ್ಲೂ ಮಂದಹಾಸ ಮೂಡಿದೆ. ಕಳೆದ ಜುಲೈನಲ್ಲಿ ಇಳುವರಿ ಹೆಚ್ಚಾದ ಕಾರಣ ಮಾರುಕಟ್ಟೆಗೆ ಬಂದು ಬೆಲೆ ಸಿಗದೆ ಪರದಾಡಿದ ರೈತರು, ಮಾರುಕಟ್ಟೆಯಲ್ಲಿ ರಾಶಿ ರಾಶಿ ಟೊಮ್ಯಾಟೋ ಎಸೆದುಹೋಗಿದ್ದ ರೈತರಿಗೆ ಸೆಪ್ಟೆಂಬರ್ ಹಾಗೂ ಅಕ್ಟೋಬರ್‌ನಲ್ಲಿ ಉತ್ತಮ ಬೆಲೆ ಸಿಕ್ಕಿದೆ.

> ಹೊರ ರಾಜ್ಯಗಳಿಗೆ ಟೊಮ್ಯಾಟೋ ಅಪಾರ ಪ್ರಮಾಣದಲ್ಲಿ ಸರಬರಾಜಾಗುತ್ತಿದೆ. ಇದರಿಂದ ಬೆಲೆ ಏರಿಕೆಯಾಗಿದೆ. ರೈತರು ಮಳೆ ಮತ್ತು ಕೊಳವೆಬಾವಿಗಳಲ್ಲಿ ನೀರಿಲ್ಲದೆ ಬೆಳೆದ ಟೊಮ್ಯಾಟೋಗೆ ಬೆಲೆ ಸಿಗದೆ ಪರದಾಡುತ್ತಿದ್ದರು. ಕಳೆದ ಆಗಸ್ಟ್‌ನಲ್ಲಿ ಬೆಲೆ ಇಲ್ಲದೆ ಪರದಾಡಿದ್ದರೂ ಇದೀಗ ಒಳ್ಳೆಯ ಬೆಲೆ ಬಂದಿರುವುದು ಸಂತಸ ತಂದಿದೆ.
>
> | ಮೀಸಾಲು ಎಂ.ವಿ.ರಮೇಶ್ ರೈತ, ಸಿ. ಹೊಸಹುಡ್ಯ

**DeccanHerald**
**Pg.12**

## UNIVERSITY OF AGRICULTURAL SCIENCES BENGALURU

Estate Office, GKVK, Bengaluru - 560 065.

No. EO/SPO/e-Proc /12/Stationery items/2024-25 Date:14.10.2024

## INVITATION FOR EXPRESSION OF INTEREST

(Through Karnataka public procurement portal only)

Expression of Interest is invited from the eligible authorized Manufacturers/ Distributers / Dealers for supply of **Stationery items etc,.** under **Annual Rate Contract for financial year 2024-25 and 2025-2026 for two years** for various Hassan, Mandya, Chintamani, and Chamarajanagara Colleges under the jurisdiction of UAS, Bangalore. Interested agencies shall visit the link **https://www.kppp.karnataka.gov.in** for necessary details like General conditions, eligibility criteria, etc. The interested agencies need to register with e-procurement portal, GOK, for participating in the rate contract an EMD of **Rs. 2,00,000/-** shall be paid in any form stipulated in e-procurement portal. HELP DESK No. 91-8046010000/ 8068948777.

Pre bid meeting: **21.10.2024 at 11:00 A.M.** Last date for uploading the tender: **25.10.2024 upto 4:00 P.M.** Date & Time for Opening of Technical bid : **29.10.2024 at 10:30 A.M.** Date & Time for Opening of Financial bid: **05.11.2024 at 10:30 A.M.**

The University reserves the right to accept or reject any or all the expression of interest tenders without assigning any reasons.

Sd/-
Estate Officer.

DIPR/CP/2516/2024-25

Prajavani
Pg.01

# ಹಣದುಬ್ಬರ ಶೇ 5.49ಕ್ಕೆ ಹೆಚ್ಚಳ

• ಜ್ಞಾನೇಂದ್ರ ಕೇಸರಿ


ನವದೆಹಲಿ: ಜುಲೈನಿಂದ ಆಗಸ್ಟ್ ವರೆಗಿನ ಅವಧಿಯಲ್ಲಿ ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ನಿಗದಿ ಮಾಡಿಕೊಂಡಿರುವ ಮಿತಿಯಲ್ಲಿ ಇದ್ದ ಚಿಲ್ಲರೆ ಹಣದುಬ್ಬರ ಪ್ರಮಾಣವು ಸೆಪ್ಟೆಂಬರ್ ತಿಂಗಳಲ್ಲಿ ಶೇಕಡ 5.49ಕ್ಕೆ ಹೆಚ್ಚಳ ಕಂಡಿದೆ.

ಇದು ಒಂಬತ್ತು ತಿಂಗಳಲ್ಲಿಯೇ ಅತಿಹೆಚ್ಚಿನ ಪ್ರಮಾಣ. ಆಹಾರ ವಸ್ತುಗಳ ಬೆಲೆಯಲ್ಲಿ ಆಗಿರುವ ತೀವ್ರ ಹೆಚ್ಚಳವು ಹಣದುಬ್ಬರ ಪ್ರಮಾಣವು ಏರಿಕೆ ಕಂಡಿರುವುದಕ್ಕೆ ಪ್ರಮುಖ ಕಾರಣ ಎಂಬುದನ್ನು ಕೇಂದ್ರ ಸರ್ಕಾರ ಸೋಮವಾರ ಬಿಡುಗಡೆ ಮಾಡಿರುವ ಅಂಕಿ–ಅಂಶಗಳು ಹೇಳಿವೆ.

ಚಿಲ್ಲರೆ ಹಣದುಬ್ಬರ ಪ್ರಮಾಣವು ಆಗಸ್ಟ್‌ನಲ್ಲಿ ಶೇ 3.65ರಷ್ಟು ಹಾಗೂ ಜುಲೈನಲ್ಲಿ ಶೇ 3.6ರಷ್ಟು ಇತ್ತು. ಕಳೆದ ವರ್ಷದ ಸೆಪ್ಟೆಂಬರ್‌ನಲ್ಲಿ ಇದು ಶೇ 5.02ರಷ್ಟು ಇತ್ತು. ಆಗಸ್ಟ್‌ನಲ್ಲಿ ಶೇ 5.66ರಷ್ಟು ಇದ್ದ ಆಹಾರ ವಸ್ತುಗಳ ಹಣದುಬ್ಬರ ಪ್ರಮಾಣವು ಸೆಪ್ಟೆಂಬರ್‌ನಲ್ಲಿ ಶೇ 9.24ಕ್ಕೆ ಏರಿಕೆ ಕಂಡಿದೆ. ಕಳೆದ ವರ್ಷದ ಸೆಪ್ಟೆಂಬರ್ ತಿಂಗಳ ಮಟ್ಟಕ್ಕೆ ಹೋಲಿಸಿದರೆ, ಈ ವರ್ಷದ ಸೆಪ್ಟೆಂಬರ್‌ನಲ್ಲಿ ತರಕಾರಿಗಳ ಬೆಲೆಯು ಶೇ 36ರಷ್ಟು ಹೆಚ್ಚಳ ಆಗಿದೆ.

ಹಣ್ಣುಗಳ ಬೆಲೆ ಶೇ 7.65ರಷ್ಟು, ದ್ವಿದಳ ಧಾನ್ಯಗಳ ಬೆಲೆಯು ಶೇ 9.81ರಷ್ಟು ಹಾಗೂ ಏಕದಳ ಧಾನ್ಯಗಳ ಬೆಲೆಯು ಶೇ 6.84ರಷ್ಟು ಹೆಚ್ಚಳ ಕಂಡಿದೆ.

## ಚಿಲ್ಲರೆ ಹಣದುಬ್ಬರ (ಶೇಕಡಾವಾರು)




### ಸಗಟು ಹಣದುಬ್ಬರ ಏರಿಕೆ

ಆಹಾರ ವಸ್ತುಗಳ ಬೆಲೆ ಹೆಚ್ಚಳವು ಸಗಟು ಹಣದುಬ್ಬರದಲ್ಲಿಯೂ ಏರಿಕೆಗೆ ಕಾರಣವಾಗಿದೆ. ಸಗಟು ಹಣದುಬ್ಬರ ಪ್ರಮಾಣವು ಸೆಪ್ಟೆಂಬರ್ ತಿಂಗಳಲ್ಲಿ ಶೇ 1.84ಕ್ಕೆ ಏರಿಕೆ ಆಗಿದೆ. ಆಗಸ್ಟ್‌ನಲ್ಲಿ ಅದು ಶೇ 1.31ರಷ್ಟು ಇತ್ತು. ಟೊಮೆಟೊ, ಈರುಳ್ಳಿ ಮತ್ತು ಆಲೂಗಡ್ಡೆ ಸಗಟು ಬೆಲೆಯು ಸೆಪ್ಟೆಂಬರ್‌ನಲ್ಲಿ ಕ್ರಮವಾಗಿ ಶೇ 74.5ರಷ್ಟು, ಶೇ 78.8ರಷ್ಟು ಹಾಗೂ 78.1ರಷ್ಟು ಏರಿಕೆ ಕಂಡಿವೆ. ಅಡುಗೆ ಎಣ್ಣೆಗಳ ಸಗಟು ಬೆಲೆ ಏರಿಕೆಯು ಶೇ 10.5ರಷ್ಟಾಗಿದೆ.

ಹವಾಮಾನ ಪರಿಸ್ಥಿತಿ ಕೂಡ ಹಣದುಬ್ಬರ ಏರಿಕೆಗೆ ಕಾರಣವಾಗಿರುವ ಸಾಧ್ಯತೆ ಇದೆ ಎಂದು ಕೇಂದ್ರ ಸಾಂಖ್ಯಿಕ ಮತ್ತು ಯೋಜನಾ ಅನುಷ್ಠಾನ ಸಚಿವಾಲಯವು ಹೇಳಿದೆ. ಹಣದುಬ್ಬರದ ಪ್ರಮಾಣವು ಗ್ರಾಮಾಂತರ ಪ್ರದೇಶಗಳಲ್ಲಿ ಹೆಚ್ಚು ತೀವ್ರವಾಗಿದೆ. ಸೆಪ್ಟೆಂಬರ್ ತಿಂಗಳಲ್ಲಿ ಗ್ರಾಮಾಂತರ ಪ್ರದೇಶಗಳಲ್ಲಿನ ಹಣದುಬ್ಬರ ಪ್ರಮಾಣ ಶೇ 5.87ರಷ್ಟು, ನಗರ ಪ್ರದೇಶಗಳಲ್ಲಿನ ಹಣದುಬ್ಬರ ಶೇ 5.05ರಷ್ಟು ಇತ್ತು.

'ಆರ್‌ಬಿಐ ಹೆಚ್ಚು ಎಚ್ಚರಿಕೆಯಿಂದ ಇರಬೇಕು ಎಂಬುದನ್ನು ಸೆಪ್ಟೆಂಬರ್ ತಿಂಗಳ ಹಣದುಬ್ಬರದ ಪ್ರಮಾಣವು ಹೇಳುತ್ತಿದೆ' ಎಂದು ಕೋಟಕ್ ಮಹೀಂದ್ರ ಬ್ಯಾಂಕ್‌ನ ಮುಖ್ಯ ಅರ್ಥಶಾಸ್ತ್ರಜ್ಞೆ ಉಪಾಸನಾ ಭಾರದ್ವಾಜ್ ಹೇಳಿದ್ದಾರೆ.

VijayaKarnataka
Pg.05

ಸಕ್ಕರೆ ಇಳುವರಿ ಆಧರಿಸಿ ದರ ನಿಗದಿ | 250 ರೂಪಾಯಿ ಹೆಚ್ಚಳ

# ಕಬ್ಬು ಬೆಳೆಗಾರರಿಗೆ ಎಫ್‌ಆರ್‌ಪಿ ಸಿಹಿ

■ **ರವಿಭಾರತಿ ಗೋಸಾವಿ** ಬೆಳಗಾವಿ
ravi.gosavi@timesofindia.com

ಪ್ರತಿ ಟನ್ ಕಬ್ಬಿನ ನ್ಯಾಯಯುತ ಮತ್ತು ಲಾಭದಾಯಕ ಬೆಲೆಯನ್ನು (ಎಫ್‌ಆರ್‌ಪಿ) 250 ರೂ. ಹೆಚ್ಚಿಸಿ, ಟನ್ ಕಬ್ಬಿಗೆ 3,400 ರೂ. ದರ ನೀಡುವಂತೆ ಸಕ್ಕರೆ ಇಲಾಖೆ ಎಲ್ಲ ಕಾರ್ಖಾನೆಗಳಿಗೆ ಆದೇಶಿಸಿದೆ.

ಕಳೆದ ವರ್ಷದ ಸಕ್ಕರೆ ಉತ್ಪಾದನೆ ಬಗ್ಗೆ 65 ಕಾರ್ಖಾನೆಗಳು ಸರಕಾರಕ್ಕೆ ಸಲ್ಲಿಸಿರುವ ವರದಿಯಲ್ಲಿ ಉಲ್ಲೇಖಿಸಿದ ಇಳುವರಿ ಆಧಾರದ ಮೇಲೆ ದರ ಪರಿಷ್ಕರಿಸಲಾಗಿದೆ. ಇದೇ ಮೊದಲ ಬಾರಿಗೆ ದೊಡ್ಡ ಮೊತ್ತದ ಎಫ್‌ಆರ್‌ಪಿ ಘೋಷಣೆ ಮಾಡಿರುವುದರಿಂದ ರೈತರಿಗೆ ಅನುಕೂಲವಾಗಲಿದೆ.

2023-24ನೇ ಹಂಗಾಮಿನಲ್ಲಿ ಪ್ರತಿ ಟನ್ ಕಬ್ಬಿಗೆ 3,150 ರೂ. ಎಫ್‌ಆರ್‌ಪಿ ನಿಗದಿ ಪಡಿಸಲಾಗಿತ್ತು. ಕಾರ್ಖಾನೆಗಳು ಸಲ್ಲಿಸಿದ ವರದಿಯಲ್ಲಿ ಉಲ್ಲೇಖಿಸಿದ ಸಕ್ಕರೆ ಇಳುವರಿಯಂತೆ 2024-25ನೇ ಹಂಗಾಮಿಗೆ ಕಾರ್ಖಾನೆಗಳು ಕರ್ನಾಟಕ ಕಬ್ಬು ಖರೀದಿ ಮತ್ತು ಸರಬರಾಜು ನಿಯಂತ್ರಣ




(ತಿದ್ದುಪಡಿ) ಅಧಿನಿಯಮ-2014ರ ಕಲಂ 9(1) ರ ಪ್ರಕಾರ ಮೊದಲ ಕಂತಿನ ರೂಪದಲ್ಲಿ ಪಾವತಿಸಬೇಕಾದ ನ್ಯಾಯಯುತ ಮತ್ತು ಲಾಭದಾಯಕ ಬೆಲೆ ಪ್ರಕಟಿಸಲಾಗಿದೆ. ಇದು ಎಕ್ಸ್-ಗೇಟ್ ದರವಾಗಿರುತ್ತದೆ.

**ಇಳುವರಿ ಆಧರಿಸಿ ದರ:** ರಾಜ್ಯಾದ್ಯಂತ ಶೇ.10.25ರಷ್ಟು ಸಕ್ಕರೆ ಇಳುವರಿಗೆ ಪ್ರತಿ ಟನ್ ಕಬ್ಬಿಗೆ 3,400 ರೂ. ನಿಗದಿಪಡಿಸಲಾಗಿದೆ. ಶೇ.10.25ಕ್ಕೆ ಮೇಲ್ಪಟ್ಟು ಇಳುವರಿಗೆ, ನಂತರದ ಪ್ರತಿಶತ 1ರಷ್ಟು ಇಳುವರಿಗೆ ಪ್ರತಿ ಟನ್‌ಗೆ 332 ರೂ.ನಂತೆ ಹೆಚ್ಚುವರಿ ಬೆಲೆ ನೀಡಬೇಕು. ಶೇ.10.25 ಕ್ಕಿಂತ ಕಡಿಮೆ ಹಾಗೂ ಶೇ. 9.50ಕ್ಕೆ ಮೇಲ್ಪಟ್ಟ ಇಳುವರಿ ಹೊಂದಿರುವ ಸಕ್ಕರೆ ಕಾರ್ಖಾನೆಗಳಿಗೆ ಪ್ರತಿಶತ 1ರಷ್ಟು ಇಳುವರಿಯ ಟನ್‌ಗೆ 332 ರೂ. ಸರಾಸರಿಯಂತೆ ನ್ಯಾಯ ಮತ್ತು ಲಾಭದಾಯಕ ಬೆಲೆ ಕಡಿಮೆ ಮಾಡಬೇಕು. ಶೇ. 9.50ಕ್ಕಿಂತ ಕಡಿಮೆ ಇಳುವರಿ ಹೊಂದಿರುವ ಕಾರ್ಖಾನೆಗಳಿಗೆ ಪ್ರತಿ ಮೆಟ್ರಿಕ್ ಟನ್‌ಗೆ 3,151 ರೂ. ಎಫ್‌ಆರ್‌ಪಿ ನಿಗದಿ ಪಡಿಸಲಾಗಿದೆ ಎಂದು ಸಕ್ಕರೆ ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ.

### ಎಫ್‌ಆರ್‌ಪಿ ಎಷ್ಟಿತ್ತು?

ಪ್ರತಿ ಕ್ವಿಂಟಾಲ್‌ಗೆ

| ವರ್ಷ | ದರ (ರೂ.) |
|---|---|
| 2013-14 | 210 |
| 2014-15 | 220 |
| 2015-17 | 230 |
| 2017-18 | 255 |
| 2018-20 | 275 |
| 2020-21 | 285 |
| 2021-22 | 290 |
| 2022-23 | 305 |
| 2023-24 | 315 |

ಪ್ರಸಕ್ತ ಹಂಗಾಮಿನ ಪ್ರತಿ ಟನ್ ಕಬ್ಬಿಗೆ ಎಫ್‌ಆರ್‌ಪಿ ನಿಗದಿ ಮಾಡಿ, ಕಾರ್ಖಾನೆಗಳ ಮಾಲೀಕರು, ಆಡಳಿತ ಮಂಡಳಿ ಮತ್ತು ಸಂಬಂಧಿತ ಜಿಲ್ಲಾಡಳಿತಕ್ಕೆ ಕಳುಹಿಸಿಕೊಡಲಾಗಿದೆ. ಈ ಪಟ್ಟಿ ಪ್ರಕಾರವೇ ಕಾರ್ಖಾನೆಗಳು ರೈತರಿಗೆ ಕಬ್ಬಿನ ದರ ಪಾವತಿಸಬೇಕು.

– **ರವಿಕುಮಾರ್** ಸಕ್ಕರೆ ಆಯುಕ್ತ

ಸಕ್ಕರೆ ಕಾರ್ಖಾನೆಗಳು ಈ ವರ್ಷದ ಎಫ್‌ಆರ್‌ಪಿ ಪಟ್ಟಿ ಪ್ರಕಟಿಸಿಲ್ಲ, ನಿಯಮ ಉಲ್ಲಂಘಿಸುವ ಕಾರ್ಖಾನೆಗಳ ಮೇಲೆ ಕ್ರಮ ಜರುಗಿಸಬೇಕಿದ್ದ ಅಧಿಕಾರಿಗಳು ಕಾರ್ಖಾನೆಗಳ ಏಜೆಂಟರಂತೆ ವರ್ತಿಸುತ್ತಿರುವುದು ಬೇಸರದ ಸಂಗತಿ.

– **ಸಿದಗೌಡ ಮೋದಗಿ** ಅಧ್ಯಕ್ಷ, ಭಾರತೀಯ ಕೃಷಿಕ ಸಮಾಜ

# ಅಡಕೆಗೆ ಚೈನೀಸ್ ರಿಂಗ್ ಸ್ಪಾಟ್ ವೈರಸ್

## ಹಸಿರು ಕಳೆದುಕೊಳ್ಳುತ್ತಿವೆ ಮರಗಳು | ರೋಗಕ್ಕಿಲ್ಲ ಔಷಧ | ಬೆಳೆಗಾರರು ಜಜ್ಜರಿತ

■ ಮಂಜುನಾಥ ಸಾಯೀಮನೆ ಶಿರಸಿ/ ಪುತ್ತೂರು(ದ.ಕ.)

ಕೊಳೆ ಹಾಗೂ ಎಲೆಚುಕ್ಕಿ ರೋಗದಿಂದ ಕಂಗಾಲಾಗಿದ್ದ ಅಡಕೆ ಬೆಳೆಗಾರರಿಗೆ ಈಗ ಮತ್ತೊಂದು ಭೂತ ಎದುರಾಗಿದೆ. ಚೈನೀಸ್ ರಿಂಗ್ ಸ್ಪಾಟ್ ವೈರಸ್ ರೋಗ ಉತ್ತರ ಕನ್ನಡ ಜಿಲ್ಲೆಯ ಶಿರಸಿ ಹಾಗೂ ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳ ತಾಲೂಕಿನಲ್ಲಿ ಕಾಣಿಸಿಕೊಂಡು ವೇಗವಾಗಿ ಹಬ್ಬತೊಡಗಿದ್ದು ಆತಂಕ ಮೂಡಿಸಿದೆ.

ಚೈನೀಸ್ ರಿಂಗ್ ಸ್ಪಾಟ್ ವೈರಸ್ ಎಲೆಚುಕ್ಕಿ ರೋಗಕ್ಕಿಂತ ಭಿನ್ನ. ಇಲ್ಲಿ ಎಲೆಗಳ ಮಧ್ಯೆ ಸಣ್ಣ ಸಣ್ಣ ವರ್ತುಲಗಳು ನಿರ್ಮಾಣವಾಗುತ್ತವೆ. ಈ ವರ್ತುಲಗಳ ಮಧ್ಯೆ ಹಸಿರಿನ ವರ್ತುಲಗಳು ಮೂಡುತ್ತವೆ. ದೂರದಿಂದ ನೋಡುವವರಿಗೆ ಅಡಕೆ ತೋಟ ಹಸಿರಾಗಿ ಕಂಡರೂ ಮರವನ್ನು ಸೂಕ್ಷ್ಮವಾಗಿ ಗಮನಿಸಿದಾಗ ರೋಗ ಬಾಧೆಗೆ ಗುರಿಯಾಗಿರುವುದು ಗಮನಕ್ಕೆ ಬರುತ್ತದೆ. ಎಲೆಚುಕ್ಕಿ ರೋಗ ಮಳೆ ಬಿಸಿಲ ವಾತಾವರಣ ಮುಕ್ತಾಯವಾದ ಬಳಿಕ ನಿಯಂತ್ರಣಕ್ಕೆ ಬರುತ್ತವೆ. ಆದರೆ, ಚೈನೀಸ್ ರಿಂಗ್ ಸ್ಪಾಟ್ ಈ ವಾತಾವರಣವನ್ನೂ ಮೀರಿ ಮುಂದುವರಿಯುತ್ತದೆ. ನಿಧಾನವಾಗಿ ಅಡಕೆ ಮರಗಳು ಹಸಿರು ಕಳೆದುಕೊಳ್ಳುತ್ತವೆ. ಶಿರಸಿ ತಾಲೂಕಿನ ಹುಸುರಿ, ಗೋಣೂರು ಹಾಗೂ ಸುತ್ತಮುತ್ತಲಿನ ಪ್ರದೇಶದ 70 ಎಕರೆಗೂ ಅಧಿಕ ಪ್ರದೇಶದಲ್ಲಿ, ಬಂಟ್ವಾಳ ತಾಲೂಕಿನ ನೇರಳಕಟ್ಟೆ ಭಾಗದ ಎರಡು ಅಡಕೆ ತೋಟಗಳಲ್ಲಿ ಈ ರೋಗ ಈಗಾಗಲೇ ಕಾಣಿಸಿಕೊಂಡಿದೆ. ಕೇವಲ ಹತ್ತು ದಿನಗಳ ಹಿಂದೆ ಒಂದೆರಡು ಮರಗಳಲ್ಲಿ ರೋಗ ಕಂಡುಬಂದಿತ್ತು. ಈಗ ತೋಟದ ಶೇ. 40ರಷ್ಟು ಅಡಕೆ ಮರಗಳಲ್ಲಿ ರೋಗ ಕಂಡುಬಂದಿದೆ ಎನ್ನುತ್ತಾರೆ ರೈತರು. ಸಹದೇವಪ್ಪ ಕೊರಗರ್, ಪ್ರಕಾಶ ಗುನಗ, ಇತರರ ತೋಟದಲ್ಲಿ ಈ ಸಮಸ್ಯೆ ಗಂಭೀರವಾದಾಗ ತೋಟಗಾರಿಕೆ ಇಲಾಖೆ ಅಧಿಕಾರಿಗಳು ಸ್ಥಳಕ್ಕೆ ಆಗಮಿಸಿ ಪರಿಶೀಲಿಸಿದ್ದಾರೆ. ಆದರೆ, ಚೈನೀಸ್ ರಿಂಗ್ ಸ್ಪಾಟ್ ವೈರಸ್‌ಗೆ ಇದುವರೆಗೂ ಸೂಕ್ತ ಔಷಧ ಇಲ್ಲದ ಕಾರಣ ಮಾದರಿಯನ್ನು ಸಂಗ್ರಹಿಸಿ ತೋಟಗಾರಿಕೆ ಮಹಾವಿದ್ಯಾಲಯಕ್ಕೆ ಸಂಶೋಧನೆಗಾಗಿ ಕಳುಹಿಸಿದ್ದಾರೆ. ಅಧ್ಯಯನ ನಡೆದ ಬಳಿಕವೇ ಔಷಧದ ಶಿಫಾರಸು ಆಗಬೇಕಿದೆ.

> ಈ ರೋಗ ಯಾವ ಕೀಟದಿಂದ ಹರಡುತ್ತಿದೆ ಎಂಬುದು ಇನ್ನೂ ಶೋಧವಾಗಬೇಕಿದೆ. ಸಾಮೂಹಿಕವಾಗಿ ಕೀಟ ನಿಯಂತ್ರಣ ಔಷಧ ಸಿಂಪಡಣೆ ಮೂಲಕ ಮತ್ತು ರೋಗಕ್ಕೆ ಒಳಗಾದ ಎಲೆಗಳನ್ನು ಕಡಿದು ನಾಶ ಮಾಡುವಿಕೆ ಈಗ ನಮ್ಮ ಮುಂದಿರುವ ಕ್ರಮ.
>
> | ಡಾ. ಸತೀಶ ಹೆಗಡೆ ತೋಟಗಾರಿಕೆ ಇಲಾಖೆ ಅಧಿಕಾರಿ, ಶಿರಸಿ



> ಚೈನೀಸ್ ರಿಂಗ್ ಸ್ಪಾಟ್ ವೈರಸ್ ಹಿಂದೆಯೇ ಇತ್ತು. ಮ್ಯಾನೇಜ್‌ಮೆಂಟ್‌ನಲ್ಲಿ ಕಂಟ್ರೋಲ್ ಮಾಡಬಹುದು. ಈ ವೈರಸ್ ಒಂದು ಮರದಿಂದ ಇನ್ನೊಂದು ಮರಕ್ಕೆ ಹರಡಲು ವೆಕ್ಟರ್‌ನ ಅಗತ್ಯವಿದೆ. ಕೆಳಗಡೆ ಲೀಫ್‌ನಲ್ಲಿ ಇದ್ದು, ಅದು ಬಿದ್ದು ಹೋದ ಮೇಲೆ ಹೊಸ ಲೀಫ್‌ನಲ್ಲಿ ಇಲ್ಲ ಎಂದರೆ ಯಾವುದೇ ಸಮಸ್ಯೆಯಿರುವುದಿಲ್ಲ. ಹೊಸ ಲೀಫ್ ಬಂದಿರುವುದರಲ್ಲಿಯೂ ಕಾಣಿಸಿಕೊಂಡರೆ ಸಮಸ್ಯೆ. ಜಾಸ್ತಿ ಬಂದರೆ ಮರವನ್ನು ನಾಶಮಾಡಲೇಬೇಕು.
>
> | ಡಾ.ಕೆ.ಬಿ.ಹೆಬ್ಬಾರ್ ನಿರ್ದೇಶಕರು, ಸಿಪಿಸಿಆರ್‌ಐ ಕಾಸರಗೋಡು

### ಕಳೆದ ವರ್ಷವೂ ಕಂಡಿತ್ತು...

ರಿಂಗ್ ಸ್ಪಾಟ್ ವೈರಸ್‌ಗಳು ಚೀನಾ ದೇಶದ ಕೆಲ ಬೆಳೆಗಳಿಗೆ ಕಾಣಿಸಿಕೊಳ್ಳುತ್ತವೆ. ಹೀಗಾಗಿ, ಈ ರೋಗಕ್ಕೆ ಚೈನೀಸ್ ರಿಂಗ್ ಸ್ಪಾಟ್ ಎಂದು ಕರೆಯುತ್ತಾರೆ. ವೈರಸ್‌ಗಳಿಂದ ಈ ಸಮಸ್ಯೆ ಉಂಟಾಗುತ್ತಿದ್ದು, ಅಡಕೆ ಗಿಡಗಳನ್ನು ಕಡಿಮೆ ಅಂತರದಲ್ಲಿ ನೆಟ್ಟ ಹಾಗೂ ಹೊಸ ತೋಟಗಳಲ್ಲಿ ಜಾಸ್ತಿ ಕಾಣಿಸಿಕೊಂಡಿದೆ. ಈ ರೋಗ ತಾಲೂಕಿನ ಲಂಡಕನಹಳ್ಳಿಯ ರೈತರೊಬ್ಬರ ಅಡಕೆ ತೋಟದಲ್ಲಿ ಕಳೆದ ವರ್ಷ ಕಾಣಿಸಿಕೊಂಡಿತ್ತು. ಆದರೆ, ಕೆಲವೇ ಮರಗಳಲ್ಲಿ ಕಾಣಿಸಿಕೊಂಡಿದ್ದರಿಂದ ಈ ಎಲೆಗಳನ್ನು ಕಡಿದು ಸುಟ್ಟು ನಾಶ ಮಾಡಲಾಗಿತ್ತಲ್ಲದೆ ಉಳಿದ ಮರಗಳಿಗೆ ಬೋರ್ಡೋ ಸಿಂಪಡಿಸಿದ್ದರಿಂದ ನಿಯಂತ್ರಣ ಕಂಡಿತ್ತು. ಒಂದೊಮ್ಮೆ ರಿಂಗ್ ಸ್ಪಾಟ್ ಕಾಣಿಸಿಕೊಂಡ ಎಲೆಗಳನ್ನು ಈಗ ಕಡಿಯಹೊರಟರೆ ಹಲವು ರೈತರ ಅರ್ಧದಷ್ಟು ಅಡಕೆ ತೋಟವೇ ಬರಿದಾಗುವ ಸಾಧ್ಯತೆ ಇದೆ!



> ಅಡಕೆಗೆ ರಿಂಗ್ ಸ್ಪಾಟ್ ವೈರಸ್ ವ್ಯಾಪಕವಾಗಿ ಹಬ್ಬುತ್ತಿದೆ. ಇನ್ನೊಂದೆಡೆ ಎಲೆಚುಕ್ಕಿ ರೋಗ ತೀವ್ರವಾಗಿದೆ. ತೋಟಗಾರಿಕೆ ಸಚಿವರು ಎಲ್ಲಿದ್ದಾರೋ ಗೊತ್ತಿಲ್ಲ. ಸ್ಥಳೀಯ ಶಾಸಕರು ರಿಂಗ್ ಸ್ಪಾಟ್ ರೋಗವನ್ನು ಗಂಭೀರವಾಗಿ ಪರಿಗಣಿಸಿ ಸಂಶೋಧನೆ, ಔಷಧ ಕಂಡು ಹಿಡಿಯುವ ಬಗ್ಗೆ ರಾಜ್ಯ ಸರ್ಕಾರದ ಮೇಲೆ ಒತ್ತಡ ಹೇರಬೇಕು.
>
> | ವಿಶ್ವೇಶ್ವರ ಹೆಗಡೆ ಕಾಗೇರಿ ಸಂಸದ, ಉತ್ತರ ಕನ್ನಡ

**Vijayavani Pg.9c**

# Sept. wholesale food prices leapt 9.5%

**Fuel, power costs slid over 4% last month, while manufactured product prices rose just 1%, reining in overall wholesale inflation pace to 1.84% from 1.3% in Aug.; most economists expect WPI to rise further in Oct. on West Asia crisis, food prices**

Vikas Dhoot
NEW DELHI

Inflation in India's wholesale prices ticked up to 1.84% in September from 1.31% in August, with food prices surging to a two-year high of 9.5% from August's 10-month low of 3.3%, as vegetables became nearly 49% costlier, marking the sharpest surge in 14 months.



**Pocket unfriendly:** Potato and onion prices were up 78.1% and 78.8%, respectively, in September. THE HINDU

Potato and onion prices were up 78.1% and 78.8%, respectively, in September, accelerating from the previous month, while tomato prices zoomed 74.5%, reversing course from a 53% decline in August. Fruits and pulses inflation eased marginally but remained high at 12.2% and 13%, respectively.

Cereals and paddy inflation eased fractionally to 8.1%, but wheat prices rose at a faster pace of 7.6% during September. Milk inflation cooled a bit to 3.2%, while eggs, meat and fish prices fell 0.8%.

Manufactured food products recorded an inflation of 5.5% in September, while vegetable and animal oils and fats were up 10.5%, albeit on a benign base last year when prices had fallen for both.

**Mild uptick**

Despite food price rise rebound, Wholesale Price Index (WPI) saw only a mild uptick on fuel and power prices dipping over 4% from September 2023 and manufactured products inflation easing a tad to 1%.

Month-on-month, the WPI was up a mild 0.06%, the food index seeing the highest gain of 1.1% .

With oil and commodity prices seeing an uptick this month, amid escalation of tensions in West Asia, and food price rise expected to stay elevated, most economists expect the WPI to rise further in October.

ICRA chief economist Aditi Nayar reckoned wholesale inflation could be between 2%-2.5% in October, adding the second half of 2024-25 could see a 'faster-than-anticipated rise' in prices if commodity prices and geopolitical conflicts flare up further.

**The Hindu Pg.13**

# Sept. inflation at 9-month high as food price surges

Vikas Dhoot
NEW DELHI

India's retail inflation shot back to a nine-month high of 5.5% in September, breaking a two-month streak under the central bank's median target of 4%, thanks to a resurgence in food price rise to 9.24% after hovering below the 6% mark through July and August.

Vegetable inflation surged from 10.7% in August to a 14-month high of 36% in September, while fruit price rise gained momentum to hit 7.65% from 6.5% a month earlier.

For rural consumers, inflation neared the 6% mark — the upper tolerance limit for the Reserve Bank of India (RBI) — to hit 5.9%, while their urban counterparts faced a price rise of 5.05% last month.

CONTINUED ON
» PAGE 10

# Inflation at 9-month high as food prices rise

Rural India, however, faced relatively milder food inflation of 9.1% compared with a 9.6% rise faced by urban consumers. Prices of pulses rose 9.81%, retreating from a 10%-plus inflation pace for the first time in 16 months, even as price rise of cereals and eggs eased marginally to 6.8% and 6.3%, respectively. However, edible oils recorded a 2.5% uptick, breaking a 19-month streak of dipping prices, amid a global hardening of prices.

Beyond food, households saw a sharp uptick of 9% in prices of personal care and effects in September. Prices for this category rose 8.4% in July and eased a tad to 7.9% in August. Core inflation that excludes food and energy prices, also rose to a nine-month high of 3.8%, in line with RBI Governor Shaktikanta Das' assertion that this element of price rise had bottomed out.

## Rate cut

While the RBI changed its monetary policy stance to neutral last week, expectations of a rate cut may take a while to materialise, with the central bank projecting average inflation of 4.8% for the October-December quarter, before cooling to 4.2% in the first quarter of 2025.

"For a rate cut to be forthcoming in the December monetary policy review, either the consumer price inflation will need to flatten considerably below 5.0% in October or the GDP growth for Q2 FY2025 will need to significantly undershoot the MPC's expectations," reckoned ICRA chief economist Aditi Nayar.

"It is likely that the increase in inflation rate for the month of September 2024 is due to high base effect and weather conditions," the NSO said.

# Food prices push inflation to 9-month high

## Exceeds RBI's target to hit 5.5% in September

GYANENDRA KESHRI
NEW DELHI, DHNS




After remaining within the Reserve Bank of India's median target of 4% during July and August, retail inflation soared to 5.49% in September, the highest level in nine months, primarily driven by a sharp jump in prices of food items, official data showed on Monday.

The Consumer Price Index-based (CPI) retail inflation stood at 3.65% in August and 3.60% in July. In September 2023, CPI, which the RBI monitors for its policy action, stood at 5.02%.

Retail food inflation surged from 5.66% in August to 9.24% September. Prices of vegetables in September were 36% higher when compared with the same month last year. Fruits became costlier by 7.65% while pulses soared by 9.81% and cereals became costlier by 6.84% during the month. Food inflation accounts for around half of the overall CPI basket.

"It is likely that the increase in inflation rate for the month of September is due to high base effect and weather conditions," the National Statistical Office said in a statement.

People in rural India have been impacted more due to the price rise. Rural inflation soared to 5.87% in September while urban retail inflation stood at 5.05%.

"The substantial rebound in the CPI inflation print for September has appreciably dampened the possibility of the stance change in the October policy being followed up by a rate cut in the December 2024 meeting," said Aditi Nayar, Chief Economist at ICRA.

▸ Inflation, Page 5

# Food prices push inflation...

Inflation, from Page 1

Last week, the RBI changed its policy stance to "neutral" from "withdrawal of accommodation" raising hopes for rate cuts. However, the central bank has kept the key policy interest rates unchanged since February 2023.

"The higher than expected September inflation further strengthens the case that RBI will need to remain on the cautious side," said Upasna Bhardwaj, Chief Economist at Kotak Mahindra Bank.

"Even the next reading appears to be settling higher than 5%. However, the winter crop arrivals should start easing some price pressures in the weeks ahead. Overall, the upside surprise to inflation does prompt us to delay our rate cut call into 2025," Bhardwaj added. High food prices also led to the jump in wholesale inflation. The wholesale price index (WPI)-based inflation increased to 1.84% in September from 1.31% recorded in the previous month. Wholesale food prices inflation surged from 3.11% in August to 11.53% in September, the highest level in 25 months.

Meanwhile, core retail inflation jumped to an eight-month high of 3.5% in September. The core inflation has been inching up since May. "Five months of gradual increase in core inflation could be a precursor to demand revival," said Devendra Kumar Pant, Chief Economist at India Ratings and Research.

"The future monetary policy action will be more data dependent. We still believe there is a low probability of monetary easing in the rest of FY25, even if there is a rate cut, it will be symbolic and shallow," Pant added.

DeccanHerald
Pg.01,05